ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	491
ಮಾನ್ಯ ಸದಸ್ಯರ ಹೆಸರು	ಶ್ರೀ ಕೆ. ಹರೀಶ್‌ಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	21-02-2022
ಉತ್ತರಿಸುವ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರಸಂ.	ಪ್ರಶ್ನೆ	ಉತ್ತರ
ಅ).	ಕೋವಿಡ್-19 ಸಾಂಕ್ರಾಮಿಕ ಸಂದರ್ಭದಲ್ಲಿ ಆರೋಗ್ಯ ಇಲಾಖೆಯ ಸಿಬ್ಬಂದಿಗಳಿಗೆ ನೀಡಬೇಕಾದ ಸವಲತ್ತುಗಳನ್ನು ನೀಡಲಾಗಿದೆಯೇ;	ನೀಡಲಾಗಿದೆ.
ಆ)	ಆಶಾ ಕಾರ್ಯಕರ್ತೆಯರಿಗೆ ಸರ್ಕಾರ ನೀಡುವ ಸಂಭಾವನೆ ಎಷ್ಟು ಹಾಗೂ ಇವರ ಕಾರ್ಯವ್ಯಾಪ್ತಿ ಏನು; ಆಶಾ ಕಾರ್ಯಕರ್ತರಿಗೆ ರಜಾ ಸೌಲಭ್ಯ ಇದೆಯೇ?	ಆಶಾ ಕಾರ್ಯಕರ್ತೆಯರು ಮಾನ್ಯತೆ ಪಡೆದ ಸಾಮಾಜಿಕ ಆರೋಗ್ಯ ಕಾರ್ಯಕರ್ತೆಯಾಗಿದ್ದು, ಸ್ವಯಂ ಪ್ರೇರಿತ ನೆಲೆಗಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಇಲಾಖೆಯ ಪೂರ್ಣಾವಧಿ ಅಥವಾ ಗುತ್ತಿಗೆ/ಹೊರಗುತ್ತಿಗೆ ನೌಕರರಾಗಿರುವುದಿಲ್ಲ. ಗ್ರಾಮಿಣ ಪ್ರದೇಶದಲ್ಲಿ ಪ್ರತಿ 1000 ಜನಸಂಖ್ಯೆಗೆ ಮತ್ತು ನಗರ ಪ್ರದೇಶದಲ್ಲಿ 2500 ಜನಸಂಖ್ಯೆಗೆ (ಕೊಳಗೇರಿ ಮತ್ತು ದುರ್ಬಲವರ್ಗದ ಪ್ರದೇಶಗಳಿಗೆ ಮಾತ್ರ) ಒಬ್ಬರಂತೆ ಆಶಾ ಕಾರ್ಯಕರ್ತೆಯರನ್ನು ಆಯ್ಕೆ ಮಾಡಲಾಗುತ್ತದೆ. • ಆಶಾ ಕಾರ್ಯಕರ್ತೆಯರಿಗೆ ರಾಜ್ಯ ಸರ್ಕಾರದಿಂದ ಮಾಸಿಕ 4000 ರೂಪಾಯಿಗಳ ನಿಶ್ಚಿತ ಗೌರವಧನವನ್ನು ನೀಡಲಾಗುತ್ತಿದೆ. • ರಾಷ್ಟ್ರೀಯ ಆರೋಗ್ಯ ಅಭಿಯಾನದಿಂದ ಎಂಟು ಆವರ್ತಕ ಮತ್ತು ನಿಯಮಿತ ಚಟುವಟಿಕೆಗಳಿಗೆ ಮಾಸಿಕ 2000 ರೂಪಾಯಿಗಳನ್ನು ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ. • ಕೋವಿಡ್-19 ನಿಯಂತ್ರಣ ಚಟುವಟಿಕೆಗಳಿಗೆ ಮಾಸಿಕ 1000 ರೂಪಾಯಿಗಳ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ. • ರಾಷ್ಟ್ರೀಯ ಆರೋಗ್ಯ ಅಭಿಯಾನದಿಂದ 29 ಚಟುವಟಿಕೆಗಳಿಗೆ ಕಾರ್ಯನಿರ್ವಹಣಾ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ. • ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆಶಾ ಕಾರ್ಯಕರ್ತೆಯರಿಗೆ ಮಾಸಿಕ 1000 ರೂಪಾಯಿಗಳ ಟೀಮ್ ಬೇಸ್ಡ್ ಇನ್ಸೆಂಟೀವ್ ಅನ್ನು ನೀಡಲಾಗುತ್ತಿದೆ. ಆಶಾ ಕಾರ್ಯಕರ್ತೆಯರು ಮೂಲತಃ ಸ್ವಯಂ ಪ್ರೇರಿತ ನೆಲೆಗಟ್ಟಿನಲ್ಲಿ ಕಾರ್ಯ ನಿರ್ವಹಿಸುವ ಸಾಮಾಜಿಕ ಆರೋಗ್ಯ

		ಕಾರ್ಯಕರ್ತೆಯಾಗಿರುತ್ತಾರೆ. ಇವರು ಫಲಾನುಭವಿಗಳು ಹಾಗೂ ಸಾರ್ವಜನಿಕರ ನಡುವೆ ಸಮಯವನ್ನು ಹೊಂದಾಣಿಕೆ ಮಾಡಿಕೊಂಡು ಕರ್ತವ್ಯ ನಿರ್ವಹಿಸುವುದರಿಂದ ರಜೆ ತೆಗೆದುಕೊಳ್ಳುವ ಪರಿಸ್ಥಿತಿಯು ಉದ್ಭವಿಸುವುದಿಲ್ಲ.
ಇ)	ಆರೋಗ್ಯ ಇಲಾಖೆಯ ಕೋವಿಡ್-19 ಸಂದರ್ಭದಲ್ಲಿ ಸಿಬ್ಬಂದಿಗಳಿಗೆ "ರಿಸ್ಕ್ ಭತ್ಯೆ" ನೀಡಲಾಗಿದೆಯೇ; ನೀಡಿದ್ದಲ್ಲಿ ಎಷ್ಟು ಸಿಬ್ಬಂದಿಗಳಿಗೆ ನೀಡಲಾಗಿದೆ; ಹಾಗೂ "ರಿಸ್ಕ್ ಭತ್ಯೆ' ನೀಡಲು ಬಾಕಿ ಇರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು?	ಹೌದು.

1. ರಾಜ್ಯ ವಲಯದಲ್ಲಿ ಕೋವಿಡ್-19 ತುರ್ತು ಸಂದರ್ಭದಲ್ಲಿ ರಿಸ್ಕ್ ಭತ್ಯೆಯನ್ನು ನೀಡಲಾಗಿರುವ ಸಿಬ್ಬಂದಿಗಳ ಸಂಖ್ಯೆ ಮತ್ತು ರಿಸ್ಕ್ ಭತ್ಯೆ ನೀಡಲು ಬಾಕಿ ಇರುವ ಸಿಬ್ಬಂದಿಗಳ ಸಂಖ್ಯೆ ಈ ಕೆಳಕಂಡಂತಿದೆ.

ರಿಸ್ಕ್ ಭತ್ಯೆಯನ್ನು ನೀಡಲಾದ ಸಿಬ್ಬಂದಿಗಳ ಸಂಖ್ಯೆ:	7930
ರಿಸ್ಕ್ ಭತ್ಯೆ ನೀಡಲು ಬಾಕಿಯಿರುವ ಸಿಬ್ಬಂದಿಗಳ ಸಂಖ್ಯೆ:	1384

2. ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ತಜ್ಞರು/ ಎಂಬಿಬಿಎಸ್ ವೈದ್ಯರು/ ಆಯುಷ್ ವೈದ್ಯರು/ ಶುಶ್ರೂಷಕಿಯರು/ ಎ.ಎನ್.ಎಂ/ ಲ್ಯಾಬ್‌ಟೆಕ್ನೀಷಿಯನ್/ ಫಾರ್ಮಾಸಿಸ್ಟ್‌ಗಳಿಗೆ ಕೋವಿಡ್-19 ರ ಸಾಂಕ್ರಾಮಿಕ ರೋಗ ನಿರ್ವಹಣೆಗಾಗಿ ಕೆಳಕಂಡಂತೆ ಮಾಸಿಕ ವಿಶೇಷ ಹೆಚ್ಚುವರಿ ಭತ್ಯೆಯನ್ನು ನೀಡಲಾಗಿದೆ.

ಕ್ರ.ಸಂ	ಅವಧಿ	ವಿಶೇಷ ಹೆಚ್ಚುವರಿ ಭತ್ಯೆ ಪಡೆದ ಸಿಬ್ಬಂದಿಗಳ ಸಂಖ್ಯೆ
1	ಅಕ್ಟೋಬರ್ 2020- ಮಾರ್ಚ್ 2021	11,758
2	ಏಪ್ರಿಲ್ 2021- ಮೇ 2021	12,912
ಜೂನ್ ಮತ್ತು ಜುಲೈ ಅವಧಿಯಲ್ಲಿ 12,912 ಸಿಬ್ಬಂದಿಗಳಿಗೆ ರಿಸ್ಕ್ ಭತ್ಯೆ ಪಾವತಿಯಾಗಿರುವುದಿಲ್ಲ.		

ಸಂಖ್ಯೆ: ಆಕುಕ 73 ಹೆಚ್‌ಎಸ್‌ಎಂ 2022

(ಡಾ. ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು